ಬೂಕನಕೆರೆ ವಿಜೇಂದ್ರ, ಮೈಸೂರು

*ಹಣದಿಂದಲೇ ನೆಮ್ಮದಿ ಸಿಗುವಂತಿದ್ದರೆ?*




ರಿಸರ್ವ್ ಬ್ಯಾಂಕಿನ ತಿಜೋರಿ ಕೊಠಡಿಯ ಮುಂದೆ ‘ನೆಮ್ಮದಿ ರೆಸಾರ್ಟ್’ ಎಂಬ ಬೋರ್ಡ್ ಇರುತ್ತಿತ್ತು.

ಕೆ.ಪಿ. ಸುಜ್ಞಾನಾಚಾರ್ಯ, ಕಲಿಕೆರೆ

*ಶೃಂಗಾರ ಮಾಡಿಕೊಂಡ ಮೇಲೂ ನನ್ನವಳು ಮತ್ತೆ ಮತ್ತೆ ಕನ್ನಡಿ ನೋಡಿಕೊಳ್ಳುತ್ತಾಳೆ. ಏಕೋ?*

‘ಎಲ್ಲಿ ಜಾರಿತೋ ಲಿಪ್‌ಸ್ಟಿಕ್ಕೂ ಎಲ್ಲೆ ಮೀರಿತೋ...’ ಎಂದು ಪರಿಶೀಲಿಸಲಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಣ್ಣು ಮದುವೆ ಆದಮೇಲೆ ಶ್ರೀಮತಿ. ಗಂಡು?*

ಮಂದಮತಿ.

ಹಾಡ್ಯ ಬ. ಜಯಾನಂದ, ಮೈಸೂರು

*‘ನುಡಿದರೆ ಮುತ್ತಿನ ಹಾರದಂತಿರಬೇಕು’ ಎಂದರು ವಚನಕಾರರು. ಈಗಿನ ಮಠಾಧೀಶರು?*

ಕುಳಿತಿರೋ ಪೀಠವು ಜಾರದಂತಿರಬೇಕು ಎನ್ನುತ್ತಾರೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಉರಿಯುವ ಕೊಳ್ಳಿ ಯಾವುದು?*




ಚಿಂತೆ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ

*ಹೊಸ ಹೆಂಡತಿ ಬಂದರೂ ಹೊರಚಾಳಿ ನಿಂತಿಲ್ಲವಲ್ಲಾ...?*

ಕೊಳೆತ ಶವದ ಮೇಲೆ ಶ್ರೀಗಂಧ ಲೇಪಿಸಿದರೆ ದುರ್ನಾತ ನಿಲ್ಲುವುದಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ

*ಸ್ಲೇಟು, ಬಳಪ, ಸೀಮೆಸುಣ್ಣ, ಕಪ್ಪುಹಲಗೆಗಳು ಇನ್ನುಮುಂದೆ ವಸ್ತುಸಂಗ್ರಹಾಲಯದಲ್ಲಾದರೂ ಸಿಗಬಹುದೆ?*

ನಿರಾಶೆ ಬೇಡ. ಸ್ಲೇಟು, ಸೀಮೆಸುಣ್ಣ ಠಾಣೆಯಲ್ಲೇ ಸಿಗುತ್ತೆ, ಕಳ್ಳರು ಹಿಡಿಯಲು ಬೇಕಲ್ಲ!

ನರಸಿಂಹ ಪೈ, ಕಾಸರಕೋಡ

*‘ಬೇಪಾರಿ ಬಚ್ಚಾ ಕಭೀ ನಹೀ ಸಚ್ಚಾ’; ಯಾಕೆ ಸಾರ್?*

ಬೇಪಾರ್ ಮೇ ಝೂಟಾ ಇದ್ದರೆ ಮಾತ್ರ ಪೇಟ್ ಭರ್ ಊಟ ಸಿಗೋದ್ರಿಂದ.

ಫಾಲನೇತ್ರ ಸಜ್ಜನ, ಶಿರಸಿ

*ವಿನಾಶದ ನಂತರವೂ ಕಲಿಯುಗವು ಮುಂದುವರಿಯುವುದೆ?*

ಖಂಡಿತ. ಕಲಿ (ವೀರ) ಮತ್ತು ಕಲಿ (ಅರಿತುಕೊ) ಇಲ್ಲದ ಯುಗವೇ ಇಲ್ಲ.

ಕಣ್ಣೂರು ಗೋವಿಂದಾಚಾರಿ, ಮೈಸೂರು

*ಹಿಂದೆ ಧನಿಕರು, ಗಣ್ಯರು ಮಾತ್ರ ಕಾರ್ ಹೊಂದಿದ್ದರು. ಈಗ ಬಹುತೇಕರು ಹೊಂದಿದ್ದಾರೆ. ಇವರನ್ನು ಏನೆಂದು ಕರೆಯಬೇಕು?*

ಕಾರ್‌ಮಿಕರು.

ವೀಣಾ ರವಿ ಪೈ, ಕಾಸರಕೋಡ

*ಜ್ಞಾನಕ್ಕೆ ಸಮಾನವಾದದ್ದು ಯಾವುದೂ ಇಲ್ಲ ಅಲ್ಲವೆ?*

ಇದೆ. ವಿವೇಕ. ವಿವೇಕಯುತ ಜ್ಞಾನದಿಂದ ಜ್ಞಾನಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸತ್ತವರ ಬಾಯಲ್ಲಿ ಅಕ್ಕಿಕಾಳು ಹಾಕುವುದೇಕೆ?*

‘ಥೂ! ಇವತ್ತೂ ಅನ್ನ ಸರಿಯಾಗಿ ಬೇಯಿಸಿಲ್ಲವಲ್ಲೇ’ ಎಂದು ರೇಗುತ್ತಾ ಎದ್ದುಕುಳಿತಾರೆಂಬ ಆಶೆ.

ಚಂದ್ರಮೌಳಿ, ಮೈಸೂರು

*ಕೊಳ್ಳಿದೆವ್ವ ಎಂದರೆ ಏನು?*

ಒಂದೇ ಸಮನೆ ಕೊಳ್ಳಿ ಕೊಳ್ಳಿ ಎಂದು ದುಂಬಾಲು ಬೀಳುವ ಸೇಲ್ಸ್‌ಮನ್.

ತಲಕಾಡು ಶ್ರೀನಿಧಿ, ಬೆಂಗಳೂರು

*ಅಹಂಕಾರಕ್ಕೆ ಉದಾಸೀನ ಮದ್ದು ಅಂತಾರೆ. ಉದಾಸೀನಕ್ಕೆ?*

ವರ್ಗಾವಣೆ!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

*ಅವಳಿಗೆ ಕನಸುಗಳಿಲ್ಲವಂತೆ. ಮನಸ್ಸು ಕೊಡಲೋ, ಬೇಡವೋ?*

ಮನಸ್ಸಲ್ಲ, ಭಾಷಣ ಕೊಡಿ. ಭಾಷಣದಿಂದ ನಿದ್ರೆ, ನಿದ್ರೆಯಿಂದ ಕನಸು, ಕನಸಿನಿಂದ ಒಲವು...

ಮೋಹನ ರು. ಹಣಗಿ, ಅಮೀನಗಡ

*ನೀನು ಪೂರ್ಣ ಸತ್ಯ ಹೇಳಬೇಕಾಗಿಲ್ಲ. ಆದರೆ ಹೇಳಿದ್ದೆಲ್ಲ ಸತ್ಯವಾಗಿರಲೆಂದರು ಹೊರೇಸ್. ಏನಿದರ ಅರ್ಥ?*

‘ನೀವು ಭ್ರಷ್ಟರೇ?’ ಎಂದು ಕೇಳಿದರೆ ’ಯಾರು ಭ್ರಷ್ಟರಲ್ಲ?’ ಎಂದು ಕೇಳಿರೆಂದು.

ಕೃಷ್ಣಪ್ರಸಾದ್, ಬೆಂಗಳೂರು

*ಧಾರಾವಾಹಿ ಬರೆಯುವವರಿಗೆ ಅದು ಹೇಗೆ ಮುಗಿಯುತ್ತದೆ ಎಂದು ಗೊತ್ತಿರುತ್ತಾ ರಾಂ?*

ತಮ್ಮ ಕಾಲದಲ್ಲೇ ಮುಗಿಯುತ್ತಾ ಎಂದೂ ತಿಳಿದಿರುವುದಿಲ್ಲ. TRP ಬೀಳದಿದ್ದರೆ ಸೀರಿಯಲ್ ಚಿರಂಜೀವಿ.

ಕುಮಾರ ಚಲವಾದಿ, ಹಾಸನ

*ಕೂತರೂ, ನಿಂತರೂ ಸುಳ್ಳನ್ನೇ ಹೇಳುವ ರಾಜಕಾರಣಿಗಳಿಗೆ ’ಪ್ರಮಾಣ ವಚನ’ ಬೋಧಿಸುವುದೇಕೆ?*



ನಂತರ ಅವರು ಯಾವ ಪ್ರಮಾಣದಲ್ಲಿ ವಚನವನ್ನು ಮುರಿಯುತ್ತಾರೆ ಎಂದು ಅಳೆಯಲು.

ಬಿ. ಚಂದ್ರೇಗೌಡ, ಬೆಂಗಳೂರು

*‘ಕೀರ್ತಿ ಶನಿ ತೊಲಗಾಚೆ’ ಎಂದು ಕುವೆಂಪು ಹೇಳಿದ್ದೇಕೆ?*

ಅವರು ಹೇಳಿದ್ದು ಮಾತ್ರವಲ್ಲ ಅನುಸರಿಸಿದರು. ನಾವು?

ಕೃಷ್ಣಮೂರ್ತಿ ಎಸ್. ಬೆಂಗಳೂರು

*ವ್ಯಕ್ತಿ ಮದುವೆಯಾಗುವಾಗ ಸೇರುವಷ್ಟು ಜನ ಆತ ಮಸಣಕ್ಕೆ ಹೋಗುವಾಗ ಸೇರುವುದಿಲ್ಲವೇಕೆ?*

ಮದುವೆಮನೆಯಲ್ಲಿ ’ಬನ್ನಿ’ ಎಂದು ಅವನು ಕರೆದಂತೆ ಇಲ್ಲಿಯೂ ಕರೆದುಬಿಟ್ಟಾನೆಂಬ ಭಯ!

■ ರಾಮ್